ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ದಿನಾಂಕ 3–1–2005 ಭಾರತೀಯ ಕೃಷಿ ವಿಮಾ ಕಂಪನಿ ಸಂಸ್ಥೆಯು ರಾಜ್ಯ ಸರ್ಕಾರವನ್ನು ಕೋರುತ್ತದೆ. ರಾಜ್ಯ ಸರ್ಕಾರದ ಪಾಲು ಬಿಡುಗಡೆ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ವಿಮಾ ಹಣ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು.

ಇ) ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದಿಂದ 2001–02ನೇ ಸಾಲಿನಿಂದ 2003ರ ಮುಂಗಾರು ಹಂಗಾಮಿನವರೆಗೆ ಬಿಡುಗಡೆ ಮಾಡಿರುವ ರಾಜ್ಯ ಸರ್ಕಾರದ ಪಾಲು ರೂ. 30773.00 ಲಕ್ಷಗಳು ವಿವರ ಈ ಕೆಳಕಂಡಂತೆ ಇದೆ.

| ವರ್ಷ. | ಬೆಳೆ ವಿಮೆ ನಷ್ಟ ಪರಿಹಾರ ರಾಜ್ಯ ಸರ್ಕಾರದ ಪಾಲು (ಲಕ್ಷ ರೂ. ಗಳಲ್ಲಿ) |
|---|---|
| 2001–02 | 6018.00 |
| 2002–03 | 12654.00 |
| 2003–04 | 12101.00 |
| **ಒಟ್ಟು** | **30773.00** |

621(214) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಉಣ್ಣೆ ರೋಗ ತಗಲಿ ರೈತ ಅನುಭವಿಸಿದ ಹಾನಿ ಎಷ್ಟು;

ಆ) ಉಣ್ಣೆ ರೋಗ ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಉಣ್ಣೆ ರೋಗದಿಂದ ಕಬ್ಬಿನ ಇಳುವರಿ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಎಷ್ಟು ಕಡಿಮೆ ಆಗಿದೆ?

ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂದಾಜು 28195 ಹೆ. ಪ್ರದೇಶದಲ್ಲಿ ಕಬ್ಬಿನ ಬೆಳೆಗೆ ಬಿಳಿ ಉಣ್ಣೆ ತಗುಲಿ ಅಂದಾಜು ಶೇ. 15–20 ರಷ್ಟು ಭಾಗದಷ್ಟು ಕಬ್ಬಿನ ಬೆಳೆಯಲ್ಲಿ ಇಳುವರಿ ಕುಂಠಿತವಾಗಿರುವ ಸಂಭವವಿದೆ.

ಆ) ಕಬ್ಬಿನ ಬೆಳೆಯನ್ನು ಬಾಧಿಸುವ ಬಿಳಿ ಕೀಟದ ಬಾಧೆಯನ್ನು ಜೈವಿಕ ಹತೋಟಿ ಕ್ರಮದ ಮೂಲಕ ಅಂದರೆ ಪರಭಕ್ಷಕ ಕೀಟಗಳ ಮೂಲಕ ಯಶಸ್ವಿಯಾಗಿ ಹತೋಟಿ ಮಾಡಲು ಸಾಧ್ಯವೆನ್ನುವುದು ಸಂಶೋಧನೆಗಳಿಂದ ತಿಳಿದು ಬಂದಿರುತ್ತದೆ. ಆದುದರಿಂದ ಬಿಳಿ ಉಣ್ಣೆ ಹೇನಿನ ಹತೋಟಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಶಿಫಾರಸ್ಸು ಮಾಡಲಾಗುತ್ತಿದೆ.

1. ಹೆಚ್ಚು ಅಂತರದ ಜೋಡಿ ಸಾಲುಗಳಲ್ಲಿ ಕಬ್ಬನ್ನು ಬೆಳೆಸುವುದು.

2. ಅನಾವಶ್ಯಕವಾಗಿ ಬೆಳೆಗೆ ಹೆಚ್ಚು ಸಾರಜನಕ ಗೊಬ್ಬರವನ್ನು ಉಪಯೋಗಿಸದಿರುವುದು. ಮತ್ತು ಸಮತೋಲನ ರಸಗೊಬ್ಬರ ಬಳಸುವುದು.

3. ಕಬ್ಬಿನ ಗಿಡದ ಸುತ್ತುಲೂ ಗರಿಗಳನ್ನು ಸುತ್ತುವುದು.

4. ಬಿಳಿ ಉಣ್ಣೆ ಹೇನನ್ನು ಭಕ್ಷಿಸುವ ಪರಭಕ್ಷ ಕೀಟಗಳಾದ ಡೈಪಾ ಎಫಿಡಿವೋರಾ ಹಾಗೂ ಮೈಕ್ರೋಮಸ್ ಮೊದಲಾದ ಕೀಟಗಳನ್ನು ಸಂರಕ್ಷಿಸಿ ಬಳಕೆ ಮಾಡುವುದು.

5. ಪರಭಕ್ಷಕ ಕೀಟಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವುದು.

6. ಸಮರ್ಪಕವಾಗಿ ನೀರಿನ ನಿರ್ವಹಣೆ ಮಾಡುವುದು.

ಈ ಕ್ರಮಗಳನ್ನು ರೈತರಿಗೆ ಮನವರಿಕೆ ಮಾಡಲು ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕ ಏರ್ಪಡಿಸಲಾಗುತ್ತಿದೆ. ಹಾಗೂ ರಿಯಾಯಿತಿ ದರದಲ್ಲಿ ಪರಭಕ್ಷಕ ಕೀಟಗಳನ್ನು ವಿತರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೆ, ಈ ಕುರಿತು 2004–05ನೇ ಸಾಲಿನಲ್ಲಿ ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡಕ್ಕೆ 26:55 ಲಕ್ಷ ಹಾಗೂ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಗೆ 9.60 ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಉಣ್ಣೆ ರೋಗದಿಂದ ಕಬ್ಬಿನ ಇಳುವರಿ ಕಡಿಮೆಯಾಗಿ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಆದಾಯ ಕಡಿಮೆ ಆಗಿರುವುದನ್ನು ನಿರ್ಣಯಿಸಲು ಸಾಧ್ಯವಿಲ್ಲ.

622(118) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಖಾಲಿ ಇರುವ ಕೃಷಿ ಅಧಿಕಾರಿ, ಕೃಷಿ ಸಹಾಯಕರು, ಫಾರೆಸ್ಟರ್ ಮತ್ತು ತೋಟಗಾರಿಕೆ ಸಹಾಯಕರ ಹುದ್ದೆಗಳನ್ನು ಸರ್ಕಾರ ಯಾವಾಗ ಭರ್ತಿ ಮಾಡುತ್ತದೆ;

ಆ) ಅಭಿವೃದ್ಧಿ ಕೆಲಸಗಳು ಕುಂಠಿತವಾಗಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು;

ಈ) ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಮಾತ್ರ ರೈತರ ಮಣ್ಣು ಪರೀಕ್ಷಾ ಕೇಂದ್ರವಿರುವುದು ಸರಿಯೇ? ಇದರಿಂದ ಇನ್ನುಳಿದ ಭಾಗದ ರೈತರಿಗೆ ಅನಾನುಕೂಲವಾಗುತ್ತಿಲ್ಲವೆ? ಇನ್ನೊಂದು ಮಣ್ಣು ಪರೀಕ್ಷಾ ಕೇಂದ್ರವನ್ನು ಹೊನ್ನಾವರದಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರ ಅಲೋಚಿಸಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಯಾವಾಗ ಮಂಜೂರಾತಿ ಮಾಡಲಾಗುವುದು (ವಿವರ ನೀಡುವುದು)?